ಓ.ಎಸ್. ನಂ. 46/2016

ಡಿ.ಡಬ್ಲ್ಯೂ: 1

ದಿನಾಂಕ:- 07-04-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಶ್ರೀ ಎಂ.ಪಿ. ರವರಿಂದ:**

ಎಲ್ಲಾ ವಾದಿಗಳು ಮತ್ತು 2 ರಿಂದ 4ನೇ ಪ್ರತಿವಾದಿಗಳು 1ನೇ ಪ್ರತಿವಾದಿಯ ಮಕ್ಕಳು ಎಂದರೆ ನಿಜ. ನನ್ನ ಮಾವ ನಂಜುಂಡಪ್ಪನ ತಂದೆ ಮುನಿವೆಂಕಟಪ್ಪ ಎಂದರೆ ನಿಜ. ಮುನಿವೆಂಕಟಪ್ಪರವರಿಗೆ ನನ್ನ ಮಾವ ಒಬ್ಬನೆ ಮಗ ಎಂದರೆ ನಿಜ. ಸದರಿ ನಂಜುಂಡಪ್ಪನಿಗೆ ವಾದಿಗಳು ಮತ್ತು 2 ರಿಂದ 4ನೇ ಪ್ರತಿವಾದಿಗಳು ಮಾತ್ರ ಮಕ್ಕಳು ಎಂದರೆ ನಿಜ. ಎಲ್ಲಾ ದಾವಾಸ್ತಿಗಳು ಮುನಿವೆಂಕಟಪ್ಪರವರ ಹೆಸರಿನಲ್ಲಿದ್ದವು ಎಂದರೆ ನಿಜ. ಮುನಿವೆಂಕಟಪ್ಪನವರ ಮರಣದ ನಂತರ ದಾವಾಸ್ತಿಗಳ ಪಹಣಿಗಳಲ್ಲಿ ನನ್ನ ಮಾವ ನಂಜುಂಡಪ್ಪನ ಹೆಸರು ಬಂದಿರುತ್ತದೆ ಎಂದರೆ ನಿಜ. ಎಲ್ಲಾ ದಾವಾಸ್ತಿಗಳು ವಾದಿ ಮತ್ತು 2 ರಿಂದ 4ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ನಿಜ. ಇಲ್ಲಿಯವರೆಗೂ ದಾವಾಸ್ತಿಗಳ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳ ಮಧ್ಯೆ ವಿಭಾಗ ಆಗಿದೆ. 2003 ರಲ್ಲಿ ವಿಭಾಗ ಆಗಿದೆ. ಆ ವಿಭಾಗ ಪತ್ರವನ್ನ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ದಾಖಲೆಯ ಪ್ರಕಾರ ಯಾವ ಯಾವ ದಾವಾಸ್ತಿಗಳು ಯಾರ ಯಾರ ಹಿಸ್ಸೆಗೆ ಎಷ್ಟು ಎಷ್ಟು ಬಂದಿರುತ್ತವೆ ಎಂಬುದನ್ನ ನಾನು ತಿಳಿದುಕೊಂಡಿರುತ್ತೇನೆ. ಯಾವ ಯಾವ ದಾವಾಸ್ತಿಗಳು ಯಾರಿಗೆ ಯಾರಿಗೆ ಎಷ್ಟು ಎಷ್ಟು ಹೋಗಿರುತ್ತವೆ ಎಂಬುದು ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿಗಳು ಸಹಿ ಮಾಡಿಲ್ಲ. ನನ್ನ ಗಂಡ ಮತ್ತು 1 ರಿಂದ 4ನೇ ಪ್ರತಿವಾದಿಗಳು ಶಾಮೀಲಾಗಿ ವಾದಿಗಳಿಗೆ ಅವರಿಗೆ ಬರತಕ್ಕ ಪಾಲನ್ನ ತಪ್ಪಿಸುವ ದುರುದ್ದೇಶದಿಂದ ಈಗ ಹೇಳಿದ ವಿಭಾಗ ಪತ್ರವನ್ನ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳಿಗೂ ಕೂಡ ದಾವಾಸ್ತಿಗಳಲ್ಲಿ ಸಮ ಪಾಲು ಇದೆ ಎಂದರೆ ಸರಿಯಲ್ಲ. 16 ನೇ ದಾವಾಸ್ತಿ ಈಗ ಹೇಳಿದ ವಿಭಾಗ ಪತ್ರದಲ್ಲಿ ಯಾರಿಗೆ ಹೋಗಿರುತ್ತದೆ ಎಂಬುದನ್ನ ನನಗೆ ಹೇಳಲು ಆಗುವುದಿಲ್ಲ. ವಾದಿಗಳಿಗೆ 16 ನೇ ದಾವಾಸ್ತಿಯಲ್ಲಿಯ ಪಾಲನ್ನ ತಪ್ಪಿಸುವ ದುರುದ್ದೇಶದಿಂದ ನಾವು 16 ನೇ ದಾವಾಸ್ತಿಯನ್ನ ವಿಭಾಗ

ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ 16 ನೇ ದಾವಾಸ್ತಿಯಲ್ಲಿಯ ಪಾಲನ್ನ ತಪ್ಪಿಸುವ ದುರುದ್ದೇಶದಿಂದ 1 ರಿಂದ 4 ನೇ ಪ್ರತಿವಾದಿಗಳು ಶಾಮೀಲಾಗಿ ಅದನ್ನ 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಯಲ್ಲಿ ಸಮಪಾಲು ಇದೆ ಎಂದರೆ ಸರಿಯಲ್ಲ. ಆ ರೀತಿ ಗೊತ್ತಿದ್ದರೂ ಕೂಡ ಇಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಎಲ್ಲಾ ದಾವಾಸ್ತಿಯಲ್ಲಿಯ ಪಾಲನ್ನ ತಪ್ಪಿಸುವ ದುರುದ್ದೇಶದಿಂದ ನಾವು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1, 3 ಹಾಗೂ 4 ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿದ್ದು ಯಾವುದೇ ಸ-ಕಾರಣ ಇಲ್ಲದೆ ಇದುದ್ದರಿಂದ ಪಾಟೀ ಸವಾಲನ್ನ ತಳ್ಳಿಹಾಕಲಾಯಿತು.**

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**(ಮಹೇಶ ಶಂ.ಪಾಟೀಲ)**
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್‌ಸಿ
ಕೆಜಿಎಫ್